**ಸಾಕ್ಷಿಯನ್ನು ಕರೆಸಲಾಯಿತು ಪ್ರಮಾಣ ವಚನ ಮಾಡಿಸಲಾಯಿತು**

**ದಿ:10-06-2026**

**ಮುಂದುವರೆದ ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಆರ್ ಎನ್ ಕೆ ವಕೀಲರಿಂದ**

ಕಮೀಷನರ್ ವರದಿಯನ್ನು ನಾನೇ ಬರೆದಿರುತ್ತೇನೆ. ನಿ ಸಿ 4 ರ 13 ನೇ ಖಂಡಿಕೆಯಲ್ಲಿ ಸ ನಂ 286ಆಸ್ತಿ 30 ವರ್ಷಗಳ ಹಿಂದೆ ಅನ್ಯ ಸಂಕ್ರಮಣ ಆಗಿ ಪುರಸಭೆ ವ್ಯಾಪ್ತಿಗೆ ಸೇರಿ ಖಾತೆಯಾಗಿದ್ದರಿಂದ ಕಂದಾಯ ದಾಖಲಾತಿಗಳು ಅಸ್ತಿತ್ವದಲ್ಲಿ ಇಲ್ಲ ಎಂದು ಬರೆದಿರುತ್ತೇನೆ. ನಾನು ಕಂದಾಯ ಇಲಾಖೆ ವ್ಯಾಪ್ತಿಗೆ ಬರುತ್ತೇನೆ. ಪುರಸಭೆ ಮತ್ತು ಕಂದಾಯ ಇಲಾಖೆ ವ್ಯಾಪ್ತಿ ಬೇರೆ ಬೇರೆ ಎಂದರೆ ಸರಿ. ಭೂ ಪರಿವರ್ತನೆಯಾಗಿ ಪುರಸಭೆಗೆ ಸೇರಿದ ನಂತರ ಕಂದಾಯ ಇಲಾಖೆಯಿಂದ ಸರ್ವೆ ಕಾರ್ಯ ಆಗುವುದಿಲ್ಲ ಎಂದರೆ ಸರಿಯಲ್ಲ. ಪುರಸಭೆ ಆಸ್ತಿಯ ಹದ್ದುಬಸ್ತು ಕಾರ್ಯವನ್ನು ಸರ್ವೆ ಕಂದಾಯ ಇಲಾಖೆಯಿಂದ ಮಾಡುವುದಿಲ್ಲ.

ನಿ ಸಿ 4 ರಲ್ಲಿ ಖಂಡಿಕೆ 6 ರಲ್ಲಿ ನಮೂದಿಸಿರುವ ಮಾಹಿತಿ ಸರಿ ಇರುತ್ತದೆ. ಅದನ್ನು ನಾನೇ ನಮೂದಿಸಿರುತ್ತೇನೆ. ಅದರಲ್ಲಿ ಗಡಿ ಗುರುತು ಅಳಿಸಿಹೋಗಿದೆ ಎಂದು ನಿಖರವಾಗಿ ನಮೂದು ಮಾಡಿರುತ್ತೇನೆಂದರೆ ಸರಿ. ನಾನು ಲೇಔಟ್ ನಕ್ಷೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ. ಲೇಔಟ್ ನಕ್ಷೆಯಲ್ಲಿ ನಿಲ್ದಾಣ, ರಸ್ತೆ, ಉದ್ಯಾನವನ, ಕಟ್ಟಡಗಳು ಇತರ ಎಲ್ಲ ಮಾಹಿತಿಗಳು ನಮೂದಾಗಿರುತ್ತದೆ ಎಂದರೆ ಸರಿ. ಅದನ್ನು ನಾನು ನ್ಯಾಯಾಲಯಕ್ಕೆ

ಹಾಜರುಪಡಿಸಿಲ್ಲ. ನಾನು ಸ್ಥಾನಿಕ ಅಳತೆ ಮಾಡಿ ಉದ್ಯಾನವನ, ನಿಲ್ದಾಣ ಜಾಗವನ್ನು ನನ್ನ ವರದಿಯಲ್ಲಿ ಗುರುತಿಸಿರುವುದಿಲ್ಲ. ಸಕಲೇಶಪುರದಿಂದ ಹಾಸನಕ್ಕೆ ಹೋಗುವ ಎರಡು ಬದಿಗಳಲ್ಲಿ ಹೇಮಾವತಿ ನದಿ ಇರುವ ತರಿ ಜಮೀನುಗಳು ಇದ್ದವು ಎಂದರೆ ಸರಿ. ಸದರಿ ಜಾಗಗಳು ರಾಷ್ಟ್ರೀಯ ಹೆದ್ದಾರಿ ಯಿಂದ 20 ಅಡಿ ಅಳದಲ್ಲಿ ಇದ್ದವು ಎಂದರೆ ಸರಿ. ಆನಂತರದಲ್ಲಿ ಅನ್ಯಸಂಕ್ರಮಣ ಮಾಡಿ ಮಣ್ಣು ತುಂಬಿದ ಜಾಗವಾಗಿರುತ್ತದೆ ಎಂದರೆ ಸರಿ.

ಹೇಮಾವತಿ ಸೇತುವೆಯಿಂದ ತೇಜಸ್ವಿ ಚಿತ್ರಮಂದಿರದವರೆಗೂ ಎರಡು ಬದಿಗಳಲ್ಲಿ ಮಣ್ಣು ತುಂಬಿ ಸಮದಟ್ಟು ಮಾಡಿರುತ್ತಾರೆಂದರೆ ಸರಿ. ಮಣ್ಣು ತುಂಬಿದ್ದರಿಂದ ಗಡಿ ಗುರುತಿಸಲು ಆಗುವುದಿಲ್ಲ ಎಂದರೆ ಸರಿ. ಪುರಸಭೆ ವ್ಯಾಪ್ತಿಯಲ್ಲಿ ಪ್ರದೇಶವನ್ನು ಅಡಿ ಲೆಕ್ಕದಲ್ಲಿ ಅಳೆಯುತ್ತಾರೆಂದರೆ ಸರಿ. ವಾದಿ ಜೊತೆ ಸೇರಿ ಸುಳ್ಳು ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. ಬಸವನಹಳ್ಳಿ ಕಡೆಯಿಂದ ಅಳತೆ ಮಾಡಿರುವ ಬಗ್ಗೆ ನ್ಯಾಯಾಲಯಕ್ಕೆ ವರದಿ ನೀಡಿರುವುದಿಲ್ಲ ಎಂದರೆ ಸರಿ. ಆದ್ದರಿಂದ ಬಸವನಹಳ್ಳಿ ಕಡೆಯಿಂದ ನಾನು ಅಳತೆ ಮಾಡಿಲ್ಲ ಎಂದರೆ ಸರಿಯಲ್ಲ. ಬಸವನಹಳ್ಳಿ ಯಾವ ಯಾವ ಸರ್ವೆ ನಂಬರ್ ಗಳನ್ನು ಅಳತೆ ಮಾಡಿಕೊಂಡು ದಾವ ಆಸ್ತಿ ಅಳತೆ ಮಾಡಿರುತ್ತೇನೆಂದು ನನಗೆ ನೆನಪಿಲ್ಲ. ಬೇರೆ ಜಮೀನುಗಳಿಂದ ಅಳತೆ ಮಾಡುವಾಗ ಸದರಿ ಜಮೀನಿನ ಮಾಲೀಕರಿಗೆ ನೋಟೀಸ ನೀಡಿರುವುದಿಲ್ಲ. ನಿ ಸಿ 3 ರಲ್ಲಿ ನಮೂದಿಸಿರುವ ನಕ್ಷೆಯಲ್ಲಿ ಯಾವ ಕಟ್ಟಡಗಳು ಬರುತ್ತದೆ ಎಂದು ನಮೂದಿಸಿಲ್ಲ ಎಂದರೆ ಸರಿ. ಖಂಡಿಕೆ 5 ರಲ್ಲಿ ತಿಳಿಸಿರುವ ಕಟ್ಟಡಗಳನ್ನು ನಕ್ಷೆಯಲ್ಲಿ ಗುರುತಿಸಿಲ್ಲ ಎಂದರೆ ಸರಿ. ಸದರಿ ಕಟ್ಟಡಗಳು ಯಾವ ಜಮೀನಿನಲ್ಲಿ ಬರುತ್ತದೆಂದು ನಾನು ಅಳತೆ ಮಾಡದೇ ಇರುವುದರಿಂದ ಅದನ್ನು ಗುರುತಿಸಿರುವುದಿಲ್ಲ ಎಂದರೆ ಸರಿಯಲ್ಲ.

ನಾನು ಪುರಸಭೆಗೆ ನೋಟೀಸ ನೀಡಿ ಸದರಿ ಆಸ್ತಿಗಳ ದಾಖಲಾತಿ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಸ ನಂ 301 ರಲ್ಲಿ ಯಾವ ಯಾವ ಕಟ್ಟಡಗಳು ಇರುವ ಬಗ್ಗೆ ನಮೂದು ಮಾಡಿಲ್ಲ. ನಾನು ಸ್ಥಾನಿಕ ಅಳತೆ ಮಾಡದೇ ನಮ್ಮ ಕಚೇರಿಯ ಹಳೆಯ ನಕ್ಷೆಯನ್ನು ಯಥವತ್ತಾಗಿ ಬರೆದು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. ಅಳತೆ ಮಾಡುವಾಗ ಕಚ್ಚಾ ಶೀಟ್ ನಲ್ಲಿ ಕಟ್ಟಡಗಳ ಗುರುತು ಮಾಡಿಕೊಂಡಿರುವುದಿಲ್ಲ. ನಾನು ಅಳತೆ ಮಾಡಿ ಕಚೇರಿಗೆ ಬಂದು ಆ ಪ್ರಕಾರ ವರದಿ ತಯಾರು ಮಾಡಿರುತ್ತೇನೆ.

**ಸಾಕ್ಷಿಗೆ ಈಗ ಒಂದು ಪತ್ರವನ್ನು ತೋರಿಸಲಾಗಿ ದಿಃ 03.12.2025 ಕ್ಕೆ 2 ನೇ ಪ್ರತಿವಾದಿ ನಮ್ಮ ಕಚೇರಿಯ ಟಪಾಲಿಗೆ ಒಂದು ಪತ್ರ ನೀಡಿರುತ್ತಾರೆ ಎಂಬುದನ್ನು ನೋಡಿ**

**ಗುರುತಿಸಿರುತ್ತಾರೆ. ಆದ್ದರಿಂದ ಅದನ್ನು ನಿ ಡಿ 15 ಎಂದು ಗುರುತಿಸಲಾಯಿತು.** ಪ್ರತಿವಾದಿಯವರು ದಿಃ 10.12.2025 ರ ಸರ್ವೆ ಕಾರ್ಯಕ್ಕೆ ಬರಲು ಆಗುವುದಿಲ್ಲ ಎಂದು ಪತ್ರ ನೀಡಿರುತ್ತಾರೆಂದರೆ ಸರಿ. 3 ಬಾರಿ ಸರ್ವೆ ಕಾರ್ಯ ಮಾಡುವಾಗ ಪ್ರತಿವಾದಿಯವರಿಗೆ ಗಡಿ ಗುರುತು ಸಿಕ್ಕಿರುವುದಿಲ್ಲ ಎಂದು ತಿಳಿಸಿರುತ್ತೇನೆಂದರೆ ಸರಿ. ಆನಂತರ ನಾನು ಗಡಿ ಗುರುತು ಸಿಕ್ಕಿರುವುದಿಲ್ಲ ಎಂದು ವರದಿ ಸಲ್ಲಿಸುವುದಾಗಿ ತಿಳಿಸಿ ಅವರನ್ನು ಬರುವ ಅವಶ್ಯಕತೆ ಇರುವುದಿಲ್ಲ ಎಂದು ಅವರಿಗೆ ಹೇಳಿರುತ್ತೇನೆಂದರೆ ಸರಿಯಲ್ಲ. ನಾನು ಮೌಖಿಕವಾಗಿ ಅವರ ಅಲಭ್ಯದ ಮಾಹಿತಿಯನ್ನು ತಿಳಿದುಕೊಂಡು ದುರುದ್ದೇಶದಿಂದ ಆ ದಿನವೇ ಸರ್ವೆ ಕಾರ್ಯ ಮಾಡಿರುತ್ತೇನೆಂದು ತಿಳಿಸಿ ದಿಕ್ಕು ತಪ್ಪಿಸಿರುತ್ತೇನೆಂದರೆ ಸರಿಯಲ್ಲ. ಆದಾಗ್ಯೂ ಸಹ ಪ್ರತಿವಾದಿಗಳು ನಿ ಡಿ 15 ಪತ್ರವನ್ನು ನೀಡಿರುತ್ತಾರೆಂದರೆ ಕಚೇರಿಯಲ್ಲಿ ನೀಡಿರುತ್ತಾರೆಂದು ನುಡಿಯುತ್ತಾರೆ. ನಾನು ನೋಟೀಸ ನೀಡಿದ ನಂತರ ಅವರು ಪತ್ರ ನೀಡಿರುವ ಬಗ್ಗೆ ಮಾಹಿತಿ ಇರುತ್ತದೆ.

ಸ ನಂ 286 ಮತ್ತು 287 ಅಸ್ತಿತ್ವದಲ್ಲಿ ಇಲ್ಲದೇ ಇದ್ದರು ವಾದಿಯವರೊಂದಿಗೆ ಶಾಮೀಲಾಗಿ ಕಚೇರಿಯಲ್ಲಿ ಸುಳ್ಳು ವರದಿ ತಯಾರಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಯಾವುದೇ ಅಳತೆ ಮಾಡದೇ ಇದ್ದರೂ ನ್ಯಾಯಾಲಯಕ್ಕೆ ಸುಳ್ಳು ದಾಖಲಾತಿ ಸೃಷ್ಟಿಸಿ ಹಾಜರುಪಡಿಸಿರುತ್ತೇನೆಂದರೆ ಸರಿಯಲ್ಲ. Memo of Instruction ರೀತಿ ನೆಡೆದುಕೊಂಡಿಲ್ಲ ಎಂದರೆ ಸರಿಯಲ್ಲ.

**ವಾದಿ ಪರ ವಕೀಲರು ಯಾವುದೇ ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.**
**ಮರುವಿಚಾರಣೆಃ ಇಲ್ಲ**

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

ಸಹಿ/-

**ಪ್ರಧಾನ ಸಿವಿಲ್ ನ್ಯಾಯಾಧೀಶರು**

**ಮತ್ತು ಜೆ.ಎಂ.ಎಫ್.ಸಿ ಸಕಲೇಶಪುರ**